# ವೈದ್ಯರೇ ದೇವರಾದರು

‘ಅವರವರ ಭಾವಕ್ಕೆ ಅವರವರ ಭಕುತಿಗೆ’ ಎಂಬಂತೆ ನಮ್ಮ ಭಾವ, ಭಕ್ತಿ ಮತ್ತು ನಂಬಿಕೆಯಲ್ಲಿ ಕೆಲವು ವ್ಯಕ್ತಿಗಳು ನಮ್ಮ ಜೀವನಕ್ಕೆ ಬೆಳಕಾಗಿ ಕಾಣುತ್ತಾರೆ. ಇದಕ್ಕೆ ನನ್ನ ಜೀವನದ ಒಂದು ಸಣ್ಣ ಉದಾಹರಣೆ...

ಒಮ್ಮೆ ನಾನು ಸಣ್ಣ ಮಗುವನ್ನು ಎತ್ತಿಕೊಂಡು ಆಡಿಸುತ್ತಿದ್ದೆ. ಅದನ್ನು ಎತ್ತಿಕೊಂಡ ಸಮಯದಲ್ಲೇ ಜಾರಿ ಕೆಳಗೆ ಬಿದ್ದೆ. ಎರಡು ಕಾಲುಗಳು ಲಟಲಟ ಎಂದು ಶಬ್ದ ಬಂದು ಮೂಳೆ ಮುರಿಯಿತು. ನನಗೆ ಏಳಲೂ ಆಗದೆ ನಿಲ್ಲಲೂ ಆಗದೆ ಮುಂದೇನು ಗತಿ? ಎಂಬ ಯೋಚನೆ ಬಂದಿತು. ಮೊದಲೇ ವಯಸ್ಸಾಗಿದೆ, ಈಗ ಹೇಗಪ್ಪಾ ಎಂದು ದೇವರನ್ನು ಸ್ಮರಿಸಿದೆ.

ಮಗ ಬಂದು ಆಂಬುಲೆನ್ಸ್‌ನಲ್ಲಿ ಕ್ಲಿನಿಕ್‌ಗೆ ಕರೆದೊಯ್ದ. ವೈದ್ಯರು ಪರೀಕ್ಷೆ ಮಾಡಿದರು. 68 ವರುಷದ ನನಗೆ ಎರಡು ಕಾಲುಗಳನ್ನು ಆಪರೇಷನ್ ಮಾಡಬೇಕು, ಹತ್ತು ಲಕ್ಷ ಆಗುತ್ತದೆ ಎಂದರು. ಮಗನ ಮುಖ ಇಳಿಬಿದ್ದಿತು.

ನನ್ನನ್ನು ಯಾವುದಾದರೂ ಒಂದು ಆಶ್ರಮಕ್ಕೆ ಸೇರಿಸು ಅಥವಾ ಸರ್ಕಾರಿ ಆಸ್ಪತ್ರೆಗೆ ಸೇರಿಸು, ಅವರು ಕೊಡುವ ಚಿಕಿತ್ಸೆಯಿಂದ ನಾನು ಹೇಗೋ ಚೇತರಿಸಿಕೊಳ್ಳುತ್ತೇನೆ ಎಂದು ಮಗನನ್ನು ಕೇಳಿದೆ. ವಾಪಸ್ ಮನೆಗೆ ಬಂದೆವು. ನನಗೆ ಆ ನೋವು ತಡೆದುಕೊಳ್ಳಲಾರದಷ್ಟು ಹಿಂಸೆ ಆಗುತ್ತಿತ್ತು. ಇನ್ನೇನು ಬೇರೆ ಆಸ್ಪತ್ರೆಯೊಂದಕ್ಕೆ ಎಡತಾಕಬೇಕು ಎನ್ನುವಷ್ಟರಲ್ಲಿ, ಬೆಳಿಗ್ಗೆ ತಪಾಸಣೆ ಮಾಡಿಸಿದ್ದ ಕ್ಲಿನಿಕ್‌ನಿಂದ ಆ ವೈದ್ಯರ ಮೂಲಕ ನನ್ನ ವಿಳಾಸ ತಿಳಿದು ಒಬ್ಬ ಸಹಾಯಕ ವೈದ್ಯೆ ನಮ್ಮ ಮನೆಗೆ ಬಂದರು. ನನ್ನ ಪರಿಸ್ಥಿತಿಯನ್ನು ನೋಡಿ ತಕ್ಷಣವೇ ಆಸ್ಪತ್ರೆಗೆ ದಾಖಲು ಮಾಡಿಕೊಂಡರು. ತುಂಬಾ ಕಡಿಮೆ ಖರ್ಚಿನಲ್ಲಿ ನನ್ನ ಎರಡು ಕಾಲುಗಳನ್ನು ಆಪರೇಷನ್ ಮಾಡಿದರು.

ನಂತರ ಆ ವೈದ್ಯೆ ನನ್ನಲ್ಲಿ ಮನೋಸ್ಥೈರ್ಯ ತುಂಬಿ, ‘ನಿಮಗೆ ಇನ್ನೂ ಬದುಕು ಇದೆ, ಬದುಕನ್ನು ಆಹ್ವಾನಿಸಿ, ಆನಂದಿಸಿ, ಪ್ರೀತಿಸಿರಿ, ಅದಕ್ಕೆ ಜೀವ ತುಂಬಿರಿ, ಇರುವಷ್ಟು ದಿನ ಬದುಕು ಸಾರ್ಥಕ ಮಾಡಿಕೊಳ್ಳಿ’ ಎಂದು ನನ್ನಲ್ಲಿ ಧೈರ್ಯದ ಮಾತುಗಳನ್ನಾಡಿದರು. ಆ ವೈದ್ಯೆ ನನ್ನ ಕಣ್ಣಿಗೆ ಸಾಕ್ಷಾತ್ ದೇವಿಯಾಗಿಯೇ ಗೋಚರಿಸಿದರು.

—ಗಾಯತ್ರಿ ಸ್ವಾಮಿ

# ಕತ್ತಲಲ್ಲಿ ಕಂಡ ಬೆಳಕು

ನಮ್ಮದು ಮಧ್ಯಮ ವರ್ಗದ ಕುಟುಂಬ. ಶ್ರೀರಾಮಪುರದ ನಗರ ಪಾಲಿಕೆಯ ಶಾಲೆಯಲ್ಲಿ 10ನೇ ತರಗತಿಯಲ್ಲಿ ಓದುತ್ತಿದ್ದೆ. ವರ್ಷದ ಎರಡನೇ ಪರೀಕ್ಷೆಯ ಶುಲ್ಕ 25 ರೂ ತುಂಬಬೇಕಾಗಿತ್ತು. ಆದರೆ ನನ್ನ ಪೋಷಕರ ಬಳಿ ಹಣವಿರಲಿಲ್ಲ. ಹೀಗಾಗಿ ನಾನು ಎಂಟು ದಿವಸ ಶಾಲೆಗೆ ಹೋಗಿರಲಿಲ್ಲ. ಆಗ ನಮಗೆ ರಾಜಕೀಯ ಶಾಸ್ತ್ರ ಬೋಧಿಸುತ್ತಿದ್ದ ಸೀತಾಲಕ್ಷ್ಮಿ ಎಂಬ ಉಪಾಧ್ಯಾಯಿನಿ ಇದ್ದರು. ಅವರಿಗೆ ನಾನು ನೆಚ್ಚಿನ ವಿದ್ಯಾರ್ಥಿನಿಯಾಗಿದ್ದೆ. ಅವರು ನನ್ನ ಗೆಳತಿಯ ಬಳಿ ಶಾಲೆಗೆ ಹೋಗುತ್ತಿಲ್ಲವಾದ ಕಾರಣ ತಿಳಿದುಕೊಂಡು ನನ್ನನ್ನು ಶಾಲೆಗೆ ಬರಲು ಹೇಳಿ ಕಳುಹಿಸಿದರು.

ನಾನು ಶಾಲೆಗೆ ಹೋಗಿ ಅವರನ್ನು ಕಂಡಾಗ ವಿಷಯ ಕೇಳಿ ತಿಳಿದುಕೊಂಡು, ‘ನಿನ್ನ ಶುಲ್ಕದ ಹಣವನ್ನು ನಾನು ತುಂಬುತ್ತೇನೆ, ನೀನು ಯೋಚಿಸದೆ ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗು’ ಎಂದು ಹೇಳಿದರು. ಆಗ ಬಹಳ ಸಂತೋಷವಾಯಿತು. ಅದರಂತೆ ನಾನು ಪರೀಕ್ಷೆ ಬರೆದು ತೇರ್ಗಡೆಯಾದೆ.

ನಂತರ ಒಳ್ಳೆಯ ಉದ್ಯೋಗ ದೊರಕಿತು. ಅದರಿಂದ ಸಂತಸಗೊಂಡ ನನ್ನ ಪೋಷಕರು, ‘ಅವರ ಉಪಕಾರದಿಂದ ನಿನಗೆ ಒಳ್ಳೆಯ ಭವಿಷ್ಯ ದೊರಕಿದೆ. ಅವರನ್ನು ಮರೆಯದೆ ನೀನು ಸಹ ಬಡ ವಿದ್ಯಾರ್ಥಿಗಳಿಗೆ ಕೈಲಾದ ಸಹಾಯ ಮಾಡು’ ಎಂದು ಹೇಳಿದರು.

ನಾನು ಈಗಲೂ ಸಹ ದೀಪ ಹಚ್ಚುವಾಗ ಆ ನನ್ನ ದೇವತೆಯನ್ನು ಮನದಲ್ಲಿ ನೆನೆಯುತ್ತೇನೆ.

—ಲಕ್ಷ್ಮೀದೇವಿ,
ಬೆಂಗಳೂರು



# ದೇವತೆಗೆ ನಮನ...

ನಾನಾಗ ಆರನೇ ತರಗತಿಯಲ್ಲಿ ಅನುತ್ತೀರ್ಣನಾಗಿ ದನ ಮೇಕೆ ಮೇಯಿಸುವ ಬದುಕಿಗೆ ಒಗ್ಗಿಹೋಗಿದ್ದೆ. ನನ್ನ ವಿದ್ಯಾಭ್ಯಾಸ ಇಷ್ಟೆ, ಎಲ್ಲಾ ನನ್ನ ಹಣೆಬರಹ ಎಂದು ಅಸಹಾಯಕನಾಗಿ ಒಂದು ದಿನ ಮನೆಯಲ್ಲೇ ಅಪ್ಪನೊಂದಿಗೆ ಕುಳಿತಿದ್ದಾಗ, ನಮ್ಮೂರು ತವನಿಧಿ ತವರು ಮನೆಯೆಂದು ಬಂದಿದ್ದ ಕಡೇಹುಡೆಯ ಮಹಿಳೆಯೊಬ್ಬರು ಗುರುಗಳ ಮನೆಯೆಂದು ನಮ್ಮನೆಗೂ ಬಂದಿದ್ದರು.

ಏನೋ ವಿಚಾರ ಮಾತನಾಡುತ್ತ ಅಲ್ಲೇ ಕುಳಿತಿದ್ದ ನನ್ನನ್ನು ಕುರಿತು ‘ಈ ಹುಡುಗ ನಿಮ್ಮ ಮಗನೆ, ಈಗೇನು ಮಾಡುತ್ತಿದ್ದಾನೆ’ ಎಂದು ಕೇಳಿದರು. ಅದಕ್ಕೆ ನಮ್ಮ ತಂದೆ, ‘ಆರನೇ ತರಗತಿ ಫೇಲಾಗಿ, ದನ ಮೇಕೆ ಕಾಯ್ದುಕೊಂಡಿದ್ದಾನೆ’ ಎಂದರು. ಆಗ ಆ ಮಹಿಳೆ ನನ್ನನ್ನೇ ನೋಡುತ್ತಾ, ‘ನೋಡು ಮಗು, ನೀನು ನಮ್ಮ ಗುರುಗಳ ಮಗ, ಓದುವ ಈ ವಯಸ್ಸಿನಲ್ಲಿ ಹೀಗೆಲ್ಲ ಮಾಡಬಾರದು, ನಮ್ಮೂರಿಗೆ ಬಂದು ನಮ್ಮ ಮನೆಯಲ್ಲಿದ್ದು ಓದುವ ಹಾಗಿದ್ದರೆ ಬಂದುಬಿಡು’ ಎಂದು ನನ್ನ ಕಡೆ ಪ್ರಶ್ನೆಯಂತೆ ನೋಡಿದರು.

ನನಗೆ ಆಗ ವಿದ್ಯಾಭ್ಯಾಸ ಮುಂದುವರಿಸುವ ಇರಾದೆ ಇಲ್ಲದಿದ್ದರೂ ಆ ತಕ್ಷಣಕ್ಕೆ ಹಿಂದೂ ಮುಂದು ನೋಡದೆ ‘ಆಯ್ತು ಬರ್ತೀನಿ’ ಎಂದೆ.

ಇಂದು ನಾನು ಬಿ.ಎಸ್ಸಿ., ಬಿ.ಎಡ್., ಎಂ.ಎ. ಮುಗಿಸಿ 32 ವರ್ಷ ಪ್ರೌಢ ಶಾಲೆಯ ವಿಜ್ಞಾನ ಶಿಕ್ಷಕನಾಗಿ, ಮುಖ್ಯ ಶಿಕ್ಷಕನಾಗಿ ಈಗ ನಿವೃತ್ತ ಜೀವನ ನಡೆಸುತ್ತಿದ್ದೇನೆ. ಅಂದು ನಮ್ಮನೆಗೆ ಬಂದು ನನ್ನ ಬದುಕನ್ನೇ ಬದಲಾಯಿಸಿದ ಆ ಮಹಿಳೆಯನ್ನು ನನ್ನ ಬದುಕಿರುವ ತನಕ ಮರೆಯಲಾರೆ. ಅವರು ಕೇಳಿದ, ‘ಬರ್ತೀಯಾ’ ಎನ್ನುವ ಮಾತಿಗೆ ‘ಬರ್ತೀನಿ’ ಎಂದದ್ದು ನನ್ನನ್ನು ಈ ಹಂತಕ್ಕೆ ತಂದಿದೆ. ಇಲ್ಲದಿದ್ದರೆ ಹೆಸರಿಲ್ಲದಂತವನಾಗಿ ಹೋಗುತ್ತಿದ್ದೇನೋ? ಆ ದೇವತೆಗೆ ಸಾವಿರ ನಮನ.

—ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ

**ಕನ್ನಡದ ಕವಿತೆಯ ಸಾಲು...** ಮಾತು ಮಾತಿಗೆ, ಕಡು ಕಷ್ಟದ ಸಮಯದಲ್ಲಿ ಮನೋಸ್ಥೈರ್ಯ ತುಂಬಲು ಅಥವಾ ಇನ್ನೊಬ್ಬರಿಗೆ ಸಾಂತ್ವನ ಹೇಳುವಾಗ, ಖುಷಿಯಾದಾಗ, ಆತಂಕ, ಒತ್ತಡದಲ್ಲಿದ್ದಾಗ ಸಂತೈಸಬಹುದಾದ ಕನ್ನಡದ ಕವಿತೆಯ ಸಾಲು ಯಾವುದು? ಯಾವ ಸಂದರ್ಭದಲ್ಲೆಲ್ಲ ಆ ಸಾಲು ನಿಮ್ಮನ್ನು ಸಮಾಧಾನದ ಕಡೆಗೆ ಕೈ ಹಿಡಿದು ಕರೆದೊಯ್ದಿದೆ? ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ನೆಚ್ಚಿನ ಸಾಲು, ಉಳಿದವರ ಮನದೊಳಗೂ ಸಮಾಧಾನದ ಕುಡಿ ಹೊತ್ತಿಸಬಹುದು. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನ ನ. 30. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಮೇಲ್ ಮಾಡಿ.